**ರಾಜ್ಯದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ರಾಷ್ಟ್ರೀಯ ಮಾನ್ಯತ ಮಂಡಳಿಯಿಂದ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ದಿನಾಂಕ:04-06-2016 ರಂದು ಬೆಳಗ್ಗೆ 11.00 ಗಂಟೆಗೆ ನಡೆದ ರಾಜ್ಯ ಮಟ್ಟದ ಮಾನ್ಯತಾ ಸಲಹಾ ಸಮಿತಿ ಸಭೆಯ ನಡಾವಳಿಗಳು.**

---

ಸಭೆಗೆ ಹಾಜರಿದ್ದ ಸಭಾ ಸದಸ್ಯರುಗಳ ಪಟ್ಟಿ:

1. ಶ್ರೀ ಆರ್. ಮಂಜುನಾಥ, ಜಂಟಿ ನಿರ್ದೇಶಕರು, ತಾ.ಶಿ.ನಿ, ಬೆಂಗಳೂರು – ಅಧ್ಯಕ್ಷರು
2. ಡಾ. ಕರಿಸಿದ್ದಪ್ಪ, ಪ್ರಾಚಾರ್ಯರು, ಸ.ಇಂ.ಕಾ, ಹಾಸನ – ಸದಸ್ಯ ಕಾರ್ಯದರ್ಶಿ
3. ಡಾ. ಪ್ರಕಾಶ್ ಕೆ.ಬಿ, ಪ್ರಾಚಾರ್ಯರು, ಸ.ಇಂ.ಕಾ, ಹಾವೇರಿ – ಸದಸ್ಯರು
4. ಡಾ: ಬಸವರಾಜು ಟಿ.ಜಿ.,ವಿಭಾಗಾಧಿಕಾರಿ, ಗಣಕಯಂತ್ರ ವಿಭಾಗ, ಎಸ್.ಕೆ.ಎಸ್.ಜೆ.ಟಿ.ಐ. ಬೆಂಗಳೂರು – ಸದಸ್ಯರು
5. ಡಾ. ಮಧು ಡಿ, ವಿಭಾಗಾಧಿಕಾರಿ. ಯಾಂತ್ರಿಕ ವಿಭಾಗ, ಸ.ಇಂ.ಕಾ, ರಾಮನಗರ – ಸದಸ್ಯರು
6. ಡಾ. ಸತೀಶ್ ಎಸ್, ವಿಭಾಗಾಧಿಕಾರಿ, ಕಾಮಗಾರಿ ವಿಭಾಗ, ಸ.ಇಂ.ಕಾ. ಕೆ.ಆರ್.ಪೇಟೆ – ಸದಸ್ಯರು
7. ಡಾ. ಗುರುಪ್ರಸಾದ ಎಂ.ಹೂಗಾರ. ಎನ್ಎಸ್ಎಸ್ ಸಂಯೋಜನಾಧಿಕಾರಿ, ತಾ.ಶಿ.ನಿ. ಬೆಂಗಳೂರು – ಸದಸ್ಯರು
8. ಶ್ರೀಮತಿ ಪವಿತ್ರ ಪಿ.ಎಸ್ ಎಸ್.ಪಿ.ಎಫ್.ಯು ಯೋಜನಾಧಿಕಾರಿಗಳು, ತಾ.ಶಿ.ನಿ. ಬೆಂಗಳೂರು – ಸದಸ್ಯರು
9. ಡಾ.ಆರ್.ವಿ.ರಂಗನಾಥ, ಪ್ರಾಧ್ಯಾಪಕರು, ಬಿ.ಎಂ.ಎಸ್. ಇಂಜಿನೀಯರಿಂಗ್ ಕಾಲೇಜು, ಬಸವನಗುಡಿ, ಬೆಂಗಳೂರು ಆಹ್ವಾನಿತ ಸಂಪನ್ಮೂಲ ವ್ಯಕ್ತಿಗಳು.

ಸದರಿ ಸಭೆಯಲ್ಲಿ ನಿರ್ದೇಶನಾಲಯದ ಮಾನ್ಯತ ಕೋಶದ (ಡಿಪ್ಲೋಮಾ) ಈ ಕೆಳಕಂಡ ಸದಸ್ಯರು ಸಹ ಹಾಜರಿದ್ದರು:

1. ಶ್ರೀ ಸತೀಶ ರ. ಹುದ್ದಾರ, ಉಪ ನಿರ್ದೇಶಕರು, ತಾ.ಶಿ.ನಿ ಬೆಂಗಳೂರು.
2. ಶ್ರೀ ಡಿ.ಹೆಚ್. ಜಗದೀಶ್, ಅಭಿವೃದ್ಧಿ ಅಧಿಕಾರಿಗಳು, ತಾ.ಶಿ.ನಿ ಬೆಂಗಳೂರು.
3. ಶ್ರೀ ಎಸ್.ಜೆ ವೆಂಕಟೇಶ ಬಾಬು, ಮಾನ್ಯತಾ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
4. ಶ್ರೀ ಬಿ.ಎಸ್ ವಾಸುಕಿ, ಮಾನ್ಯತಾ ಸಂಯೋಜಕರು, ತಾ.ಶಿ.ನಿ ಬೆಂಗಳೂರು.
5. ಶ್ರೀ ಭರತ್ ಲಾಲ್ ಎ.ಆರ್, ಮಾನ್ಯತಾ ಸಂಯೋಜಕರು, ತಾ.ಶಿ.ನಿ ಬೆಂಗಳೂರು.

ಮಾನ್ಯ ಸಭಾಧ್ಯಕ್ಷರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಭೆಗೆ ಆಗಮಿಸಿದ ಎಲ್ಲರನ್ನು ಸ್ವಾಗತಿಸಿ ತಾಂತ್ರಿಕ ಶಿಕ್ಷಣಕ್ಕೆ ಒತ್ತು ಕೊಟ್ಟು ಗುಣಮಟ್ಟದ ಶಿಕ್ಷಣವನ್ನು ನೀಡಿ ಕುಶಲತೆಯುಳ್ಳ ಕಾರ್ಯಪಡೆಯನ್ನು ತಯಾರಿಸಲು. ಮಾನ್ಯತೆ ಪಡೆಯುವುದು ಅವಶ್ಯಕವಾಗಿರುತ್ತದೆ. ಇದರ ಜೊತೆಗೆ ಕೇಂದ್ರ ಸರ್ಕಾರದ RUSA. TEQIP. MHRD ಹಾಗೂ ರಾಜ್ಯ ಸರ್ಕಾರದ ಇತರೆ ಅನುದಾನಗಳನ್ನು ಪಡೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ಮಾನ್ಯತಾ ಮಂಡಳಿ ನವದೆಹಲಿ ಇವರಿಂದ ಇಂಜಿನೀಯರಿಂಗ್ ಕಾಲೇಜುಗಳ ಎಲ್ಲಾ ವಿಭಾಗಗಳು ಮಾನ್ಯತೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳು ಜರುಗಿಸಬೇಕಾದ ಕ್ರಮಗಳು, ಮಾನ್ಯತೆಯ, ಅದರ ಮಹತ್ವ, ಉಪಯೋಗಗಳು ಅಲ್ಲದೆ ಪ್ರಾಚಾರ್ಯರರು ಮತ್ತು ಬೋಧಕ/ಬೋಧಕೇತರ ಸಿಬ್ಬಂದಿಯವರ ಹೊಣೆಗಾರಿಕೆ ಹಾಗೂ ನಿರ್ದೇಶನಾಲಯದ ರಾಜ್ಯ ಸಲಹಾ ಸಮಿತಿಯ ಪಾತ್ರ ಇವುಗಳ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

1. **ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳನ್ನು ಎನ್.ಬಿ.ಎ ಮಾನ್ಯತೆಗೊಳಪಡಿಸುವುದಕ್ಕೆ ತಯಾರಿ:**

ಸಭಾಧ್ಯಕ್ಷರು ವಿಶೇಷ ಆಹ್ವಾನಿತರಾದ ಡಾ. ಆರ್.ವಿ.ರಂಗನಾಥ, ರವರನ್ನು ಆಹ್ವಾನಿಸಿ ಮಾನ್ಯತಾ ಸಂಬಂಧಿ ತಯಾರಿ ಬಗ್ಗೆ ಸಭೆಗೆ ಕೋರಿದಾಗ ಶ್ರೀಯುತರು ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳು ಮಾನ್ಯತೆಗೊಳಪಡುವದು ಆದ್ಯತೆಯ ಕಾರ್ಯವಾಗಿರುತ್ತದೆ ಎಂದು ತಿಳಿಸಿ ಈ ಕೆಳಗಿನ ತಯಾರಿ ಅಂಶಗಳನ್ನು ವಿವರಿಸಿದರು.

- ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳು ರಾಷ್ಟ್ರೀಯ ಮಾನ್ಯತಾ ಮಂಡಳಿ ಅಂತರ್ಜಾಲ ತಾಣದಲ್ಲಿರುವ ಸ್ವಯಂ ಮೌಲ್ಯ ಮಾಪನ ವರದಿ (SAR) ಗಳನ್ನು ಪಡೆದು, ಸದರಿ ವರದಿಯ ಎಲ್ಲಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ತಿಳಿಸಿದರು. SAR ನಲ್ಲಿರುವ ಹಲವಾರು ಪ್ರಕ್ರಿಯೆಗಳು ಶೈಕ್ಷಣಿಕ ವಲಯಕ್ಕೆ ಸಂಬಂಧಿಸಿದ್ದರಿಂದ ,ಯಾವುದೇ ರೀತಿಯ ಹಣಕಾಸಿನ ಅನುದಾನ ಅಥವಾ ಯಂತ್ರೋಪಕರಣಗಳ ಅವಶ್ಯಕತೆ ಕೂಡಲೇ ಇರುವದಿಲ್ಲ ಎಂಬ ಅಂಶವನ್ನು ಗಮನಕ್ಕೆ ತಂದರು.
- SAR ಅನ್ನು ಸಂಪೂರ್ಣವಾಗಿ ತುಂಬಿ, ಮಾನ್ಯತಾ ಸಂಬಂಧಿ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸುವ ಅರ್ಹವುಳ್ಳ ಕನಿಷ್ಠ 2 ಪ್ರೋಗ್ರಾಂಗಳನ್ನು ಪ್ರಾಚಾರ್ಯರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಗುರುತಿಸಿ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಲು ಸಭೆಗೆ ತಿಳಿಸಿದರು.

ಕ್ರಮ: ಮಾನ್ಯತಾ ಕೋಶ (ಇಂಜಿನೀಯರಿಂಗ್) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಹಾಗೂ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರು.

2. ಪ್ರತಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಮಾನ್ಯತಾ ಸಂಯೋಜಕರನ್ನು ನೇಮಿಸುವುದು:

- ಶ್ರೀ ಸತೀಶ ರ. ಹುದ್ದಾರ, ಉಪ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಇವರು ಮಾತನಾಡಿ ಮಾನ್ಯತೆಗೆ ಸಂಬಂಧಿಸಿದಂತೆ ಕಾಲೇಜು ಸಂಯೋಜಕರನ್ನು ಹಾಗೂ ವಿವಿಧ ಪ್ರೋಗ್ರಾಂಗಳಿಗೊಬ್ಬರಂತೆ ಸಂಯೋಜಕರನ್ನು ನೇಮಿಸಿ ಪ್ರಾಚಾರ್ಯರ ಸಮೇತ ಎಲ್ಲಾ ಸಂಯೋಜಕರುಗಳ ಸಂಪೂರ್ಣ ಸಂಪರ್ಕ ವಿವರಗಳನ್ನು ನಿರ್ದೇಶನಾಲಯಕ್ಕೆ ನೀಡಲು ತಿಳಿಸಿದರು. ಇದಕ್ಕೆ ಸಭಾಧ್ಯಕ್ಷರು ಸಮ್ಮತಿಸಿದರು.
- ಸದರಿಯವರ ಕೋರಿಕೆಯ ಮೇರೆಗೆ ಈಗಾಗಲೇ ನೊಂದಾಯಿಸಲ್ಪಟ್ಟಿರುವ ಸರ್ಕಾರಿ ಇಂಜನೀಯರಿಂಗ್ ಕಾಲೇಜು ಹಾಸನ ಮತ್ತು ಎಸ್.ಕೆ.ಎಸ್.ಜೆ.ಟಿ.ಐ ಬೆಂಗಳೂರು ಕಾಲೇಜುಗಳಿಗೆ ಡಾ.ಆರ್.ವಿ.ರಂಗನಾಥ ರವರು ಭೇಟಿ ನೀಡಿ ಮಾನ್ಯತಾ ಸಂಬಂಧಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲು ಸಮ್ಮತಿಸಿದರು.
- ಸಂಪರ್ಕ ವಿವರಗಳುಳ್ಳ ಪಟ್ಟಿ ಸಿದ್ಧವಾದ ನಂತರ ಪ್ರಾಚಾರ್ಯರ ಮತ್ತು ಸಂಯೋಜಕರ ಮಾನ್ಯತಾ ಸಂಬಂಧಿಸಿದ ಕಾರ್ಯಾಗಾರ ಹಮ್ಮಿಕೊಳ್ಳಲು ಶ್ರೀ ಡಿ.ಹೆಚ್. ಜಗದೀಶ್, ಅಭಿವೃದ್ಧಿ ಅಧಿಕಾರಿಗಳು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಇವರು ಕೋರಿದಾಗ ಸಭಾಧ್ಯಕ್ಷರು ಸಮ್ಮತಿಸಿದರು.

ಕ್ರಮ: ಮಾನ್ಯತಾ ಕೋಶ (ಇಂಜಿನೀಯರಿಂಗ್) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಹಾಗೂ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರು.

3. ಇಲಾಖೆಯ ಅಂತರ್ಜಾಲತಾಣ ಅವಲೋಕಿಸುವ ಬಗ್ಗೆ:

- ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಿಗೆ ಸೂಕ್ತವಾದ ಮಾರ್ಗದರ್ಶನ ಮತ್ತು ಮಾನ್ಯತೆಗೆ ಸಂಬಂಧಿಸಿದ ಸುತ್ತೋಲೆಗಳನ್ನು ಪ್ರಚುರ ಪಡಿಸಲು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಂತರ್ಜಾಲ ತಾಣ dte.kar.nic.in ನಲ್ಲಿ NBA-ENGG ಎಂಬ Folder ಅನ್ನು ವಿಶೇಷವಾಗಿ ಸದರಿ ಕಾರ್ಯಕ್ಕೆ ಸ್ಥಾಪಿಸಲಾಗಿರುತ್ತದೆ, ಇದನ್ನು ಕಾಲಕಾಲಕ್ಕೆ ಅವಲೋಕಿಸಿ ಮಾನ್ಯತೆಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳನ್ನು ಇನ್ನು ಮುಂದೆ dtenbaengg@gmail.com ಎಂಬ ಇ-ಮೇಲ್ ವಿಳಾಸದ ಮೂಲಕ ನಡೆಸಲು ಡಾ. ಗುರುಪ್ರಸಾದ ಎಂ. ಹೂಗಾರ ಮತ್ತು ಶ್ರೀಮತಿ ಪವಿತ್ರ ಪಿ.ಎಸ್. ಕೋರಿದರು. ಇದಕ್ಕೆ ಸಭಾಧ್ಯಕ್ಷರು ಸಮ್ಮತಿಸಿದರು.

**ಕ್ರಮ: ಮಾನ್ಯತಾ ಕೋಶ (ಇಂಜಿನೀಯರಿಂಗ್) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಹಾಗೂ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರು.**

4. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಮೇಲಿನ ಚರ್ಚೆ:

- ಡಾ. ಕರಿಸಿದ್ದಪ್ಪ, ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ತಮ್ಮ ಸಂಸ್ಥೆಯಲ್ಲಿ ಜರುಗುತ್ತಿರುವ ಮಾನ್ಯತಾ ಪ್ರಕ್ರಿಯೆಗಳ ಬಗ್ಗೆ ವಿಸ್ತೃತವಾಗಿ ಸಭೆಗೆ ತಿಳಿಸಿ ಸ.ಇಂ.ಕಾಲೇಜುಗಳ ಮಾನ್ಯತೆ ಪಡೆಯುವದು ತುಂಬಾ ಅವಶ್ಯಕವಾಗಿದ್ದು ಮತ್ತು ಮಾನ್ಯತೆ ಪಡೆಯುವದು ತುಂಬಾ ಕಷ್ಟವೇನಲ್ಲ ಎಂಬ ವಿಚಾರವನ್ನು ಸಭೆಗೆ ತಿಳಿಸಿದರು.
- ಉಳಿದಂತೆ ಸದಸ್ಯರಾದ ಡಾ. ಪ್ರಕಾಶ್ ಕೆ.ಬಿ, ಡಾ. ಬಸವರಾಜು ಟಿ.ಜಿ. ಡಾ. ಮಧು ಡಿ ಹಾಗೂ ಡಾ. ಸತೀಶ್ ಎಸ್ ರವರುಗಳು ಮಾತನಾಡಿ ತಮ್ಮ ಸಂಸ್ಥೆಯಲ್ಲಿನ ಮಾನ್ಯತಾ ಸಂಬಂಧಿ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಎದುರಾಗಬಹುದಾದ ಸಾಧಕ ಬಾಧಕಗಳ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು.
- ಶ್ರೀ ಎಸ್.ಜೆ ವೆಂಕಟೇಶ ಬಾಬು, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಇವರು ಮಾತನಾಡಿ ಈಗಾಗಲೇ ಪಾಲಿಟೆಕ್ನಿಗಳ ಮಾನ್ಯತೆಗೆ ಸಂಬಂಧಿಸಿದಂತೆ ಜರುಗಿಸಿದ ಕ್ರಮ ಹಾಗೂ ಅದರ ಯಶಸ್ಸಿನ ಬಗ್ಗೆ ವಿಸ್ತೃತವಾಗಿ ಮಾತನಾಡಿ ಮಾನ್ಯತೆ ಪಡೆಯುವದು ಸುಲಭವಲ್ಲವಾದರೂ ಸಂಸ್ಥೆಯ ಸಾಂಘಿಕ ಬಲ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮದ ಮೂಲಕ ಸಾಧ್ಯವಾಗುವದೆಂದು ಸಭೆಗೆ ತಿಳಿಸಿದರು.
- ಸಭಾಧ್ಯಕ್ಷರು ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಜರುಗಿಸಲು ಸಭೆಗೆ ಕೋರಿ ಎಲ್ಲಾ ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳು ಮಾನ್ಯತೆ ಪಡೆಯುವದು ಕಡ್ಡಾಯವಾಗಿದ್ದು, ಇದರಿಂದ ಇಲಾಖೆಗೆ ಮತ್ತು Stake Holder ಗಳಿಗೆ ಲಾಭವಾಗುತ್ತದೆಂದು ಸಭೆಗೆ ತಿಳಿಸಿ ವಂದನಾರ್ಪಣೆ ಮಾಡಲು ಡಾ. ಗುರುಪ್ರಸಾದ ಎಂ. ಹೂಗಾರ ಇವರಿಗೆ ತಿಳಿಸಿದರು. ಅದರಂತೆ ಸದರಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭಾಧ್ಯಕ್ಷರು
(ಆರ್. ಮಂಜುನಾಥ)